

ತುಕಡಿಯನ್ನು ರಾಜದೂತರೊಡನೆ ಕಳಿಸಿದ. ಅವರ ಜೊತೆಗೆ ಒಂದು ಪತ್ರವನ್ನೂ ಕೊಟ್ಟುಕಳಿಸಿದ.

ರಾಣಿಯವರ ತಂದೆಗೆ ಮಂತ್ರಿಯವರ ಓಲೆಯನ್ನು ಕೊಟ್ಟು ಮಹಾರಾಣಿ ಹಾಗೂ ರಾಜಕುಮಾರನನ್ನು ಕಳುಹಿಸಿಕೊಡುವಂತೆ ಕೈ ಮುಗಿದು ರಾಜದೂತರು ಪ್ರಾರ್ಥಿಸಿದರು. ಮಂತ್ರಿ ಕಳುಹಿಸಿದ ಕಾಗದ ಓದಿದ ಮಹಾರಾಣಿಯವರ ತಂದೆ, ತಡಮಾಡದೆ, ಮಗಳು–ಮೊಮ್ಮಗುವನ್ನು ತಮ್ಮ ಸೈನ್ಯದ ತುಕಡಿಯೊಂದಿಗೆ ಕಳುಹಿಸಿದರು.

ಮಹಾರಾಣಿ ಹಾಗೂ ರಾಜಕುಮಾರ ಅರಮನೆಗೆ ಆಗಮಿಸಿದ ವಿಚಾರ ತಿಳಿಯುತ್ತಲೇ ಕೊಠಡಿಯೊಳಗಿದ್ದ ಮಹಾರಾಜರು ಹೊರಗೆ ಬರಲೇಬೇಕಾಯ್ತು! ರಾಜ ತನ್ನ ಬೆನ್ನಿನ ಕೆಳಭಾಗವನ್ನು ಸವರುತ್ತಾ, ಮುಟ್ಟಿ ನೋಡಿಕೊಳ್ಳುತ್ತಲೇ ಇದ್ದ. ರಾಜನಿಗೇ ಅಚ್ಚರಿ! ಬಾಲ ಬೆಳೆದೇ ಇರಲಿಲ್ಲ. ಈ ಬಗ್ಗೆ ಎಲ್ಲರಲ್ಲೂ ಪ್ರಶ್ನೆ ಮೂಡಿತು.

ಮಂತ್ರಿ, ಆ ದಿನ ಬೇಟೆಗೆ ಹೋಗಿದ್ದ ರಾಜನನ್ನು ತಾನು ಹಿಂಬಾಲಿಸಿ ಹೋಗಿದ್ದು, ಅವರು ಕೋತಿ ಮರಿಯ ಬಾಲ ಕತ್ತರಿಸಿದ್ದನ್ನು ತಾನು ನೋಡಿದ್ದು, ಕೋತಮ್ಮ ಶಾಪ ಕೊಟ್ಟದ್ದು, ಆ ಶಾಪಕ್ಕೆ ಮಹಾರಾಜರು ಕಂಗಾಲಾಗಿದ್ದು, ನಂತರ ತಾನು ರಾಜವೈದ್ಯರನ್ನು ಕರೆದುಕೊಂಡು ಹೋಗಿ ಕೋತಿಮರಿಗೆ ಚಿಕಿತ್ಸೆ ಕೊಡಿಸಿ, ಪುನಃ ಬಾಲ ಬೆಳೆಯುವ ಹಾಗೆ ಮಾಡಿದ್ದು, ಶಾಪ ಹಿಂಪಡೆಯುವಂತೆ ಕೋತಮ್ಮನನ್ನು ಕೇಳಿಕೊಂಡಿದ್ದು... ಎಲ್ಲವನ್ನೂ ಹೇಳಿದರು.

ಈಗ ಎಲ್ಲರೂ ಮಹಾರಾಣಿಯವರ ತಂದೆಯವರಿಗೆ ಬರೆದ ಪತ್ರದಲ್ಲಿ ಏನಿತ್ತು? ಒಂದೂ ಮಾತಾಡದೆ ಅವರು ಅದೇ ಕ್ಷಣ ಮಹಾರಾಣಿ, ರಾಜಪುತ್ರರನ್ನು ಮನೆಗೆ ಕಳುಹಿಸಿದ್ದು ಏಕೆ? ಎನ್ನುವ ಬಗ್ಗೆ ಮಂತ್ರಿಯವರ ಬಾಯಿಯಿಂದಲೇ ಕೇಳಲು ಕಾತುರರಾದರು.

ಆಗ ಮಹಾರಾಣಿ ರಾಜದೂತರು ತಂದ ಪತ್ರದ ವಿಚಾರ ಹೇಳಿದರು. ‘ಅನ್ಯರಾಜ್ಯಗಳ ಅರಸರಿಂದ ವಿವಾಹಯೋಗ್ಯ ಕನ್ಯಾಮಣಿಗಳ ಮಾಹಿತಿ ಅರಮನೆ ತಲುಪುವ ಮೊದಲೇ ಮಹಾರಾಣಿ ಮತ್ತು ರಾಜಪುತ್ರರನ್ನು ಮರಳಿ ಕಳುಹಿಸಬೇಕಾಗಿ ಪ್ರಾರ್ಥನೆ’ ಎಂದು ಮಂತ್ರಿ ಪತ್ರ ಬರೆದಿದ್ದ ಎಂದಾಗ ಸಭಾ ಗಾಂಭೀರ್ಯ ಮರೆತು, ಮಹಾರಾಜ ಹಾಗೂ ರಾಜಪರಿವಾರ ನಗೆಗಡಲಲ್ಲಿ ಮುಳುಗಿತು.

●